International Journal of Kannada Research
www.kannadajournal.com

ISSN: 2454–5813
IJKR 2022; 8(4): 39-41
© 2022 IJKR
www.kannadajournal.com
Received: 01-09-2022
Accepted: 06-10-2022

**ಶೋಭಾ ಹುಣಚಪ್ಪಾ**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ಕರ್ನಾಟಕ, ಭಾರತ

**Corresponding Author:**
**ಶೋಭಾ ಹುಣಚಪ್ಪಾ**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ಅಧ್ಯಯನ ಸಂಸ್ಥೆ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ, ಕರ್ನಾಟಕ, ಭಾರತ

# ನೊಂದ ಮಹಿಳೆಯರ ಗಟ್ಟಿಧ್ವನಿ ವಸುಂಧರಾ ಭೂಪತಿ

**ಶೋಭಾ ಹುಣಚಪ್ಪಾ**

ಡಾ. ವಸುಂಧರಾ ಭೂಪತಿಯವರು ನಮ್ಮ ನಾಡು ಕಂಡ ಪ್ರಖ್ಯಾತ ಮಹಿಳಾ ಸಾಹಿತಿಗಳಲ್ಲಿ ಒಬ್ಬರು. ಇವರು ಮಹಿಳಾಪರ ಸಂಘಟನೆಗಳ ಬಗೆಗೆ ಅಪಾರ ಗೌರವ, ಅಭಿಮಾನವನ್ನು ಹೊಂದಿದ್ದಾರೆ. ಅಲ್ಲದೆ, ಈ ಸಂಘಟನೆಗಳೊಂದಿಗೆ ನಿರಂತರ ಒಡನಾಟವುಳ್ಳವರು. ಯಾವುದೇ ರೀತಿಯ ಮಹಿಳೆಯರ ಮೇಲಿನ ಅತ್ಯಾಚಾರ, ಅನ್ಯಾಯ, ಶೋಷಣೆ, ದೌರ್ಜನ್ಯಗಳ ವಿರುದ್ಧ ಕಾನೂನಾತ್ಮಕವಾಗಿ ಶಾಂತಸ್ವಭಾವದ ಗಟ್ಟಿ ಹೋರಾಟಗಾರ್ತಿಯೂ ಹೌದು. ಮಹಿಳೆಯರ ಅಸ್ಮಿತೆಯ ವಿಚಾರಗಳೆಂದರೆ ಇವರಿಗೆ ಅಭಿನಂದನೀಯ.

ಮೂಲತಃ 'ಏಷ್ಯಾದ ಬೆಳಕು' ಎಂದೇ ಜಗದ್ವಿಖ್ಯಾತನಾದ ಬುದ್ಧನ, ಅಣ್ಣ ಬಸವಣ್ಣನ, ಮಹಾನ್ ಮಾನವತಾವಾದಿ ಡಾ.ಬಿ.ಆರ್.ಅಂಬೇಡ್ಕರ್‌ರವರ ತತ್ವಾದರ್ಶಗಳನ್ನು ಪರಿಪಾಲಿಸಿಕೊಂಡು ಬಂದಂತವರು. ಉಚ್ಚಕುಲದ ಬ್ರಾಹ್ಮಣ ಕುಟುಂಬದಲ್ಲಿ ಜನಿಸಿ, ಚಾತುರ್ವರ್ಣ ಭೇದಗಳನ್ನು ದಿಕ್ಕರಿಸಿದಂತವರು.

ದಿಟ್ಟ ಶರಣೆ ಅಕ್ಕನಂತೆ ತಾವೂ ಒಬ್ಬ ಮಹಿಳೆಯಾಗಿ ವಸುಂಧರಾ ಭೂಪತಿಯವರು ಲೋಕನಿಯಮ, ನಿಂದನೆಗಳಿಗೆ ಕಿವಿಗೊಡದೆ ಮೇಲು–ಕೀಳು, ಜಾತಿ–ಮತ ಭೇದಗಳೆನ್ನದೆ ತಾವು ವರಿಸಿದ ಹುಡುಗನನ್ನು ಅಂತರಜಾತಿ ವಿವಾಹವಾಗಿ ಮಹಿಳೆಯರ ಸಾಮಾಜಿಕ ಸ್ಥಾನಮಾನಗಳನ್ನು ಇನ್ನಷ್ಟು ಗಟ್ಟಿಗೊಳಿಸಿದ್ದಾರೆ. ಅಲ್ಲದೆ ತಮ್ಮ ಸಾಮುಖ್ಯದ 'ಮಾನವ ಮಂಟಪ'ದ ಅಡಿಯಲ್ಲಿ ಹಲವಾರು ಅಂತರಜಾತಿ ವಿವಾಹಗಳನ್ನು ನೆರವೇರಿಸಿ ಕೊಡುವ ಮೂಲಕ ಅವರ ಬದುಕಿಗೆ, ನಿರ್ದಿಷ್ಟ ಅರ್ಥಕಲ್ಪಿಸಿ, ಭದ್ರ ಬುನಾದಿ ಹಾಕಿಕೊಟ್ಟಿದ್ದಾರೆ. ಇದರಿಂದ ಅವರು ನಮ್ಮ ದೇಶದ ಸಂವಿಧಾನದ ಪ್ರಮುಖ ತತ್ವಗಳಾದಂತಹ ಸಮಾನತೆ, ಮತ್ತು ಜ್ಯಾತ್ಯಾತೀತ ಅಂಶಗಳ ಪರಿಪಾಲಕರು ಮತ್ತು ಪೋಷಕರೂ ಎಂಬುದು ಹೊಳೆಯದೇ ಇರದು. ಇವರು ತಮ್ಮ ವೈದ್ಯ ವೃತ್ತಿಯ ಜೊತೆ ಜೊತೆಗೆ ತಮ್ಮ ಹತ್ತಿರ ಬಂದ ಆಪ್ತ ಸ್ನೇಹಿತರಿಗೆ, ಮಹಿಳೆಯರಿಗೆ ಇತರ ಅಪರಿಚರಿಗೂ, ಪರಿಚಿತರಾಗಿ ನೊಂದು ಬೆಂದು ಬಂದವರ ಸಮಸ್ಯೆಗಳಿಗೆ ಸೂಕ್ತವಾದಂತಹ ಆಪ್ತ ಸಲಹೆಗಳನ್ನು ನೀಡಿದ್ದಾರೆ. ಅವುಗಳೆಂದರೆ ಅತ್ಯಾಚಾರ, ದಾಂಪತ್ಯ ಜೀವನದಲ್ಲಿ ಉಂಟಾದ ಬಿರುಕು, ಅಪ್ರಾಪ್ತ ಬಾಲಕಿಯರ ಮೇಲಿನ ದೌರ್ಜನ್ಯ, ವೇಶ್ಯಾವಾಟಿಕೆ, ಭ್ರೂಣಹತ್ಯೆಯಂತಹ ಹಲವಾರು ದುಷ್ಕೃತ್ಯಗಳಿಗೆ ಕೊಡಲಿ ಪೆಟ್ಟು ಹಾಕುವಲ್ಲಿ ಸಫಲರಾಗಿದ್ದಾರೆ. ಹೀಗೆ ಸ್ತ್ರೀಯರ ಸಹಲವಾರು ವಿಧದ ಸಮಸ್ಯೆಗಳಿಂದ ರೋಸಿ ಹೋದಂತವರ ಬದುಕಿನಲ್ಲಿ ಹೊಸ ಜೀವನವನ್ನು ಕಟ್ಟಿಕೊಳ್ಳಲು, ತಮ್ಮ ಅಸ್ತಿತ್ವವನ್ನು ಇನ್ನಷ್ಟು ಗಟ್ಟಿಗೊಳಿಸಿಕೊಳ್ಳಲು ಹುರಿದುಂಬಿಸಿದಂತವರು

ಡಾ. ವಸುಂಧರಾ ಭೂಪತಿಯವರು, ಹಾಗೆಯೇ ಮಹಿಳೆಯರ ದೈನಂದಿನ ಆರೋಗ್ಯಪರ ಚಟುವಟಿಕೆಯಿಂದ ಹಿಡಿದು ಅವಳ ಸಮಸ್ತ ಶ್ರಯೋಭಿವೃದ್ಧಿಗಾಗಿ ತಮ್ಮನ್ನು ಹಲವಾರು ನಮೂನೆಯ ಕ್ರಿಯಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಂತವರು

- ಲೇಖಕಿಯರ ಆತ್ಮಕತೆಗಳ ವಿರಳತೆ ಮನಗಂಡು ಲೇಖಕಿಯರ ಸಾಮೂಹಿಕ ಸಂವಾದ ಏರ್ಪಡಿಸಿ ತಮ್ಮ ಬದುಕಿನ ಹಿನ್ನೆಲೆ ಬೆಲೆಗಳನ್ನು ಆತ್ಮಕತೆಯ ಸ್ವರೂಪದಲ್ಲಿ ತಾವೇ ಬರೆದುಕೊಡುವಂತಹ ವಿನೂತನ 'ಲೇಖಲೋಕ' ಕಾರ್ಯಕ್ರಮವನ್ನು ಪರಿಚಯಿಸಿ ಪುಸ್ತಕ ರೂಪದಲ್ಲಿ ಹೊರತಂದಿದ್ದಾರೆ.
- ಸಾಹಿತಿ ಸಾ.ರಾ.ಅಬೂಬಕರ್‌ರವರ ಅಧ್ಯಕ್ಷತೆಯಲ್ಲಿ ೨ ದಿನಗಳ ಲೇಖಕಿಯರ ಸಮ್ಮೇಳನವನ್ನು ಹಮ್ಮಿಕೊಂಡಿದ್ದರು. ಅಲ್ಲದೇ, ಕನ್ನಡ ಸಾಹಿತ್ಯ ಪರಿಷತ್ತಿನ ಸಹಯೋಗದೊಂದಿಗೆ

'ಸಾಧಕರೊಂದಿಗೆ ಸಂವಾದ' ದ ಮೂಲಕ ಸಾಹಿತ್ಯ, ಸಿನಿಮಾ, ರಂಗಭೂಮಿ ರಾಜಕೀಯ ಹೀಗೆ ಹಲವಾರು ಕ್ಷೇತ್ರಗಳ ಸಾಧಕಿಯರನ್ನು ಪರಚಯಿಸಿದ್ದಾರೆ.

ಕರ್ನಾಟಕ ವಿಜ್ಞಾನ ಪರಿಷತ್ತಿನಲ್ಲಿಯೂ 'ಮಹಿಳೆ ಮತ್ತು ವಿಜ್ಞಾನ' ಎಂಬ ಯೋಜನೆ ಆರಂಭಿಸಿ, ಇಂದಿನ ಆಧುನಿಕ ಯುಗದಲ್ಲಿಯೂ ಅನೇಕ ಮಹಿಳೆಯರು 'ಮೌಢ್ಯತೆ' ಎಂಬ ಮಾರಿಗೆ ಬಲಿಯಾಗಿ ಅಂಧಕಾರದ ಕೂಪದಲ್ಲಿ ಬಿದ್ದು, ಬಂಗಾರದಂತಹ ಬದುಕನ್ನು ಅತಂತ್ರಗೊಳಿಸಿಕೊಂಡಿದ್ದಾಳೆ. ಆಶ್ಚರ್ಯವೆಂದರೆ ಅಕ್ಷರಸ್ಥ ಮಹಿಳೆಯರೇ ಇಂತಹ ಮೌಢ್ಯತೆಗೆ ಹೆಚ್ಚಿನ ಸಂಖ್ಯೆಯಲ್ಲಿ ಒಳಗಾಗುತ್ತಿರುವುದು ದುರಂತದ ಸಂಗತಿ, ಇದಕ್ಕೆ ಕಿರುತೆರೆ, ದಾರಾವಾಹಿ, ಜ್ಯೋತಿಷ್ಯ ಶಾಸ್ತ್ರದಂತಹ ಕಾರ್ಯಕ್ರಮಗಳ ವೀಕ್ಷಣೆಯಿಂದ ಏಕೆಂದರೆ ಇಂದಿನ ಸಮೂಹ ಮಾಧ್ಯಮದ ಕಾರ್ಯಕ್ರಮ ಹೆಚ್ಚಾಗಿ ಸಮಾಜಕ್ಕೆ ಒಳ್ಳೆಯ ಸಂದೇಶ ಸಾರುವಂತಹ ಮೌಲಿಕ ಗುಣಾತ್ಮಕವಾದ ಅಂಶಗಳ ಬದಲಾಗಿ ಮಾಟ-ಮಂತ್ರ, ಭಯಾನಕ ಅಮಾನುಷ ದೃಶ್ಯಗಳು, ಪರಸ್ಪರ ದ್ವೇಷ ಅಸೂಯೆಂತವುಗಳು ಮಹಿಳೆಯರ ಸಾಮಾಜಿಕ, ಮಾನಸಿಕ ಸ್ವಾಸ್ಥ್ಯದ ಮೇಲೆ ಗಂಭೀರ ದುಷ್ಪರಿಣಾಮಗಳುಂಟು ಮಾಡುತ್ತಿವೆ. ಎಂಬುದು ಸರ್ವವಿಧಿತ ಎಂದೇನಿಸುತ್ತದೆ. ಇದಕ್ಕೆ ಇಂದಿನ ಬಹುತೇಕ ಧಾರಾವಾಹಿಗಳೇ ಸ್ಪಷ್ಟ ಉದಾಹರಣೆ, ಹಾಗಾಗೀ ಡಾ.ವಸುಂಧರಾ ಭೂಪತಿಯವರು ಮಹಿಳೆಯ ಸರ್ವಾಂಗೀಣ ಅಭಿವೃದ್ಧಿಗಾಗಿ ಮೌಢ್ಯತೆಯ ಮುಸುಕನ್ನು ಸರಿಸಿ, ಮಹಿಳೆರಲ್ಲಿ ವೈಜ್ಞಾನಿಕ ಮನೋಭಾವನೆ ಬೆಳೆಸಿ ಮಾನಸಿಕವಾಗಿ, ಸದೃಢರೂ ಜಾಗೃತರೂ ಆಗಲು ಪ್ರೇರಪಿಸಿದ್ದಾರೆ. ಆದ್ದರಿಂದಲೇ ಡಿ.ಯಶೋಧಾ ಸಂಪಾದಿತ ಕೃತಿಯಾದ 'ರೆಕ್ಕೆ ಬಿಚ್ಚಿ ಹಾರೋಣ' ಎಂಬ ಮಹಿಳಾ ಅಸ್ಮಿತೆಯ ಅರಿವು ಕೃತಿಯಲ್ಲಿನ 'ಭೌತಿಕಕ್ಕಿಂತ ಬೌದ್ಧಿಕ ಸೌಂದರ್ಯವೇ ಮೇಲು' ಎಂಬುದು ಇವರ ಲೇಖನದ ಸಮರ್ಥನೀಯ ಶೀರ್ಷಿಕೆಯಾಗಿದೆ.

'ಮಹಿಳೆ ಮತ್ತು ಮೌಢ್ಯ', ಭೂಮಿಗಾಥೆ' ಸ್ತ್ರೀ ಅರೋಗ್ಯದ ಸೂತ್ರಗಳು 'ಮಹಿಳೆ ಮತ್ತು ವಿಜ್ಞಾನ' ಮಹಿಳೆಯರ ಹದಿಹರೆಯದ ಸಮಸ್ಯೆಗಳು ಇಂತಹ ಹಲವಾರು ವಿಶಿಷ್ಟ ಕೃತಿಗಳನ್ನು ಓದುಗರ ಚಿಂತನೆಗೆ ಹಚ್ಚಿಕೊಟ್ಟಿದ್ದಾರೆ. ಇಲ್ಲಿ ಅವರ 'ಭೂಮಿಗಾಥೆ' ಎಂಬುದು ಸಾಹಿತ್ಯಸೇತು ಪ್ರಶಸ್ತಿ ವಿಜೇತ ಕೃತಿ. ಇದರಲ್ಲಿ ಒಟ್ಟು ೨೬ ಕಥಾ ಪ್ರಸಂಗಗಳಿವೆ. ಇದು ವಸುಂಧರಾ ಭೂಪತಿಯವರ ಹೆಸರಿನ ಸಮಾನ ಅರ್ಥದಲ್ಲಿ ಮೂಡಿಬಂದ ಪರ್ಯಾಯ ರೂಪದ ಕಥಾಗುಚ್ಛವೇ ಆಗಿದೆ.

ಅವರ ವೃತ್ತಿ ಬದುಕಿನೊಡನೆ ಹಲವಾರು ವಿಧದ ನೋವು ಸಮಸ್ಯೆಗಳಿಂದ ನಲುಗಿ ಬಂದ ಮಹಿಳೆಯರ ಸಮಸ್ಯೆಗಳನು ತಮ್ಮ ಮನೆಯ ಸಮಸ್ಯೆಗಳೆಂದು ಬಗೆದು ತುಂಬಾ ಆತ್ಮೀಯವಾಗಿ ಆಪ್ತ ಸಲಹೆಗಳ ಮುಖಾಂತರ ಸಾಮಾಜಿಕ, ಧಾರ್ಮಿಕ, ಕೌಟುಂಬಿಕ ಮತ್ತು ಮಾನಸಿಕ ಸಮಸ್ಯೆಗಳಿಗೆ ತಾಳ್ಮೆಗೆಡದೆ ಶಾಶ್ವತ ಪರಿಹಾರ ನೀಡಿದ ಸಂಗತಿಗಳಿವೆ. ಪ್ರತಿಯೊಂದು ಕತೆಯಲ್ಲೂ ಅವರ ಅಂತಃಕರಣ ವಿನಮ್ರತೆ, ಮಾನವೀಯತೆ ಎದ್ದು ಕಾಣುವಂತಹ ಬಹುಮುಖ ವ್ಯಕ್ತಿತ್ವ ಅವರದು.

ಅದು ಅಲ್ಲದೇ ಅವರ ಇನ್ನೊಂದು ಮುಖ್ಯ ಕೃತಿ ಎಂದರೆ 'ಮಹಿಳೆ ಮತ್ತು ಮೌಢ್ಯ' ಇಂದಿನ ಯುಗದಲ್ಲಿ ಮಹಿಳೆ ಎಲ್ಲಾ ರಂಗಗಳಲ್ಲಿಯೂ ಜಾಗತೀಕ ಮಟ್ಟದಲ್ಲಿ ಮುಂದುವರೆದರೂ ಕೆಲವೊಂದು ಸೂಕ್ಷ್ಮ ಸಂದರ್ಭದಲ್ಲಿ 'ತೆರಣಿಯ ಹುಳು ತನ್ನ ಬಲೆಯಿಂದ ತಾನೆ ಸಾವು ಅಪ್ಪುವಂತೆ' ಎಂಬ ವಚನದಂತೆ ವಿನಾಶದ ಅಂಚಿನಲ್ಲಿದ್ದಾಳೆ. ಏಕೆಂದರೆ ಮಾನಸಿಕ ದೌರ್ಬಲ್ಯದಿಂದಾಗಿ ಅವಳ ಬದುಕು ಸಂಕೀರ್ಣವಾಗಿದೆ. ಮಾಟ-ಮಂತ್ರ ದೆವ್ವಭೂತ, ಭಾನಾಮತಿ, ಜ್ಯೋತಿಷ್ಯ ಇಂತಹ ಮೂಢನಂಬಿಕೆಗಳ ಕಪ್ಪುಛಾಯೆಗಳು ಅವಳ ಇಡೀ ಬದುಕನ್ನು ಆವರಿಸಿ ಅಸಮಾಧಾನಗೊಳಿಸಿವೆ. ಹಾಗಾಗಿ ಸ್ತ್ರೀಯರು ಎಂಥಾ ಸಂದಿಗ್ಧ ಸಮಸ್ಯೆಗಳೇ ಎದುರಾಗಲಿ ಅವುಗಳನ್ನು ಮೆಟ್ಟಿನಿಲ್ಲುವಂತಹ ಮನೋಬಲವನ್ನು ವೃದ್ಧಿಸಿಕೊಳ್ಳಬೇಕು ಮತ್ತು ಪುರುಷ ಪ್ರಧಾನ ಸಮಾಜ ಸ್ತ್ರೀ ಪರ ಚಿಂತನೆಗಳಿಗೆ ಸಂವೇದನೆಗಳಿಗೆ ಸಹಕಾರ, ಪ್ರೋತ್ಸಾಹ ನೀಡುವಂತಾಗಬೇಕು ಮುಖ್ಯವಾಗಿ ಈ ಮೌಢ್ಯತೆಯ ವಿಚಾರವಾಗಿ ೨೦೧೫-೧೬ ರಲ್ಲಿ ಕರ್ನಾಟಕ ಎಲ್ಲಾ ಸಮಾನ ಮನಸ್ಕ ಸಂಘಟನೆಗಳೊಂದಿಗೆ ಕರ್ನಾಟಕ ಲೇಖಕಿಯರ ಸಂಘ ಮೌಡ್ಯ ಪ್ರತಿಬಂಧಕ ಕಾಯ್ದೆ ಜಾರಿಗೆ ಒತ್ತಾಯಿಸಿ ಬೃಹತ್ ಪ್ರತಿಭಟನೆಯನ್ನು ಹಮ್ಮಿಕೊಳ್ಳಲಾಗಿತ್ತು.

ಸ್ತ್ರೀ ಭ್ರೂಣ ಹತ್ಯೆಯೆಂದರೆ ತಾಯಿಯಗರ್ಭದಲ್ಲಿ ಇರುವಾಗಲೇ ಹೊಸಕಿ ಹಾಕುವಂತಹ ಕ್ರೂರ ಕೃತ್ಯ. ಇದು ಲಿಂಗತಾರತಮ್ಯತೆಯಿಂದ ಹೆಣ್ಣು ಸಂಕುಲಕ್ಕೆ ಕುತ್ತು ತಂದು ಸ್ತ್ರೀ ಪುರುಷರ ನಡವಿನ ಲಿಂಗಾನುಪಾತದ ಅಸಮಾನತೆಯಿಂದ ಲೈಂಗಿಕ ದೌರ್ಜನ್ಯಗಳಂತಹ ಪ್ರಕರಣಗಳಿಗೆ ದಾರಿ ಮಾಡಿಕೊಟ್ಟಂತಹ ಮುಖ್ಯ ಕಾರಣವಾಗಿದೆ. ಈ ಸ್ತ್ರೀ ಭ್ರೂಣ ಹತ್ಯೆಗೆ ಸಂಬಂಧಿಸಿದಂತೆ ನನ್ನ ಒಂದು ಚುಟುಕು ಕವನ ಇಂತಿದೆ.

'ಅಯ್ಯೋ! ಅಯ್ಯೋ ! ಕೊಯ್ಯಬೇಡಿ
ಎಳೆಯ ಚಿಗುರೊಂದನು
ಅಂದು ಹೆಣ್ಣು, ಇಂದು ಹೊನ್ನು
ಇದು ತಿಳಿದಿಲ್ಲ ಪಕ್ಕಾ ನಿಮಗಿನ್ನೂ'

ಮಹಿಳೆಯು ಶತಶತಮಾನಗಳಿಂದಲೂ ಅನ್ಯಾಯ, ಅತ್ಯಾಚಾರ, ದೌರ್ಜನ್ಯ ಶೋಷಣೆಗಳಿಂದ ತತ್ತರಿಸಿದಂತವಳು ಇಂತಹ ಪ್ರಕರಣಗಳಿಂದ ಇಂದಿಗೂ ಸಂಪೂರ್ಣ ಮೋಕ್ಷ ಸಿಗದೆ ಇರುವಂತಹದ್ದು ತೀವ್ರ ಚಿಂತನಾರ್ಹ ಸಂಗತಿ, ಏಕೆಂದರೆ ದಿನನಿತ್ಯದ ಪತ್ರಿಕೆಗಳಲ್ಲಿ ಟಿ.ವಿ.ವಾಹಿನಿಗಳಲ್ಲಿ ಇಂತಹ ಒಂದಲ್ಲ ಒಂದು ಪ್ರಕರಣ ಸುದ್ಧಿ ಇದ್ದದ್ದೆ. ಇದಕ್ಕೆ 'ನಿರ್ಭಯಾ'ದಂತಹ ಪ್ರಕರಣಗಳೇ ಸಾಕ್ಷಿ. ಅಂದಾಗ ಹೆಣ್ಣು ಮಕ್ಕಳ ಪಾಲಿಗೆ ಎಲ್ಲಿದೆ ೧೯೪೭ರ ಸಂಪೂರ್ಣ ಸ್ವಾತಂತ್ರ್ಯ? ಆದರೆ ಸ್ವಲ್ಪ ಸಮಾಧಾನಕರ ಸಂಗತಿಯೆಂದರೆ, ಇತ್ತೀಚಿಗೆ ನಮ್ಮನಾಡಿನ ಹಲವಾರು ಖ್ಯಾತ ಮಹಿಳಾ ಹೋರಾಟಗಾರ್ತಿಯರಾದಂತಹ ಡಾ.ಗೀತಾ ನಾಗಭೂಷಣ, ಬಿ.ಟಿ. ಲಲಿತಾನಾಯಕ, ಕೆ. ನೀಲಾ, ಡಾ. ಮೀನಾಕ್ಷಿ ಬಾಳಿ, ಡಾ. ವಿಜಯಶ್ರೀ ಸಬರದ, ಡಾ.ಎನ್. ಗಾಯತ್ರಿ ಮುಂತಾದವರ ಸಮ್ಮುಖದಲ್ಲಿ ಹುಟ್ಟಿಕೊಂಡಂತಹ ಮಹಿಳಾಪರ, ಜನಪರ ಸಂಘಟನೆಗಳ ನಿರಂತರ ಹೋರಾಟದ ಫಲವಾಗಿ ಮತ್ತು ತಮ್ಮ ಹರಿತವಾದ ಲೇಖನಿಯಿಂದ ಮಹಿಳೆಯರಲ್ಲಿ ಜಾಗೃತಿಯನ್ನು ಆತ್ಮಸ್ಥೈರ್ಯವನ್ನು ತುಂಬಿರುವಂತಹದ್ದು, ಅನ್ಯಾಯದ ವಿರುದ್ಧ ಸಿಡಿದೆಳಲು ಹುರಿದುಂಬಿಸಿರುವಂತಹದು ತುಂಬಾ ಸ್ಮರಣೀಯವೂ, ಸ್ವಾಗತಾರ್ಹ ಸಂಗತಿಯೂ ಹೌದು. ಈ ನಿಟ್ಟಿನಲ್ಲಿ ಪ್ರಸ್ತುತ ಪರಿಸ್ಥಿತಿಗನುಗುಣವಾಗಿ ಮಹಿಳೆಯರು ಇನ್ನಷ್ಟು ತೀವ್ರಗತಿಯಲ್ಲಿ ಜಾಗೃತರೂ ಕ್ರೀಯಾಶೀಲರಾಗಿರಬೇಕು ಎಂಬುದರಲ್ಲಿ ಎರಡು ಮಾತಿಲ್ಲ.

ಈಗಾಗಲೇ ಹೇಳಿದಂತೆ ಡಾ.ವಸುಂಧರಾ ಭೂಪತಿಯವರೂ ಕೂಡಾ ಅನೇಕ ಮಹಿಳಾವಾದಿ ಸಾಹಿತಿ ಮತ್ತು ಹೋರಾಟಗಾರ್ತಿಯರ ಸಾಲಿನಲ್ಲಿ ಪ್ರಖ್ಯಾತರಾಗಿದ್ದಾರೆ. ಇವರು ನೊಂದ ಮಹಿಳೆಯರ ಬಾಳಿನ ಆಶಾಜ್ಯೋತಿಯಾಗಿದ್ದಾರೆ. ವೈದ್ಯಕೀಯ ವೃತ್ತಿಯೊಂದಿಗೆ, ಎಲ್ಲರಿಗೂ ತಿಳಿಯುವ ಸರಳ

ಭಾಷೆಯಲ್ಲಿ ವೈದ್ಯ ಸಾಹಿತ್ಯದ ಜೊತೆಗೆ ಸೃಜನಶೀಲ, ವೈಚಾರಿಕ, ಕವಯತ್ರಿಯಾಗಿ, ನಾಟಕಕಾರ್ತಿಯಾಗಿ, ಲೇಖಕಿಯಾಗಿ, ಸದಾ ಮಹಿಳೆಯರ ಅಸ್ಮಿತೆಯ ತುಡಿತದ ಸ್ವಭಾವದವರು. ಅವರು ಹೆಣ್ಣಿನ ಸ್ಥಿತಿಗತಿಯನ್ನು ವಿಶ್ಲೇಷಿಸುತ್ತಾ, ಮಹಿಳೆಯರು ಬದಲಾಗಬೇಕಾದ ಅನಿವಾರ್ಯತೆಯ ಕುರಿತಾದ ಅವರ 'ಶುರುವಾಗಲಿ ಕ್ರಾಂತಿ' ಎಂಬ ಕವನದ ಒಂದು ನುಡಿ ಇಂತಿದೆ.

ಚಂಡಿ ಚಾಮುಂಡಿ ಅವತಾರ ತಾಳಿ
ರಣಹದ್ದುಗಳ ಇಂಚಿಂಚೂ ಸೀಳಿ
ನಿಲ್ಲಿಸಬೇಕಿದೆ ಈ ವಿಕೃತ ದಾಳಿ
ನಮ್ಮ ತನುಮನಕ್ಕೆ ನಾವೇ ಕಾವಲು
ಇನ್ನಾರು ಹೇಳಿ?
ಬದುಕಲು ಬಿಡಿ ಎಂದು
ಬೇಡಿಕೊಳ್ಳುವ ಬದಲು
ಬದಲಾಗಬೆಕು ಕೋಮಲೆ
ಕಲಿಯಬೇಕು ಬದುಕುವ ಕಲೆ

ಎಂಬ ಅವರ ಈ ಕವನದ ಆಶಯ ಮಹಿಳೆಯರ ನಡೆ ತನ್ನ ಬದುಕಿನ ಬದಲಾವಣೆಯ ಕಡೆ ಸಾಗಬೇಕೆಂಬ ಪ್ರೇರಣೆಯಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ ಡಾ.ವಸುಂಧರಾ ಭೂಪತಿಯವರು ಹೈದ್ರಾಬಾದ ಕರ್ನಾಟಕದ ಅಪರೂಪದ, ಜನಪ್ರಿಯ ಲೇಖಕಿಯಾಗಿದ್ದಾರೆ. ಜೊತೆಗೆ ತಮ್ಮ ವೈದ್ಯ ವೃತ್ತಿಯ ಜೊತೆಗೆ ಹಲವಾರು ವಿವಿಧ ಸೇವಾ ಕ್ಷೇತ್ರಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಂತಹ ಕ್ರಿಯಾಶೀಲ ಪ್ರತಿಭಾ ಶಕ್ತಿವುಳ್ಳವರು, ಇನ್ನೊಂದು ಮುಖ್ಯವಾದಂತಹ ವಿಚಾರವೆಂದರೆ ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಥಮ ಮಹಿಳಾ ಅಧ್ಯಕ್ಷೆಯಾಗಿ ಸೇವೆ ಸಲ್ಲಿಸಿದ್ದು ಹೆಮ್ಮೆಯ ವಿಷಯ. ಈ ಸಂದರ್ಭದಲ್ಲಿ ಅವರು ಬಾಲ್ಯದಿಂದಲೂ ಪುಸ್ತಕಗಳ ಸಹಚರ್ಯದಲ್ಲಿ ಬೆಳೆದಂತಹ ಇವರಿಗೆ ಅತ್ಯಮೂಲ್ಯ ಅವಕಾಶ ಲಭಿಸಿ ಪ್ರಾಧಿಕಾರದ ನವ ವಿಧದ ಯೋಜನೆಗಳ ಅಡಿಯಲ್ಲಿ ಪುಸ್ತಕ ಸಂಸ್ಕೃತಿಯು ಇನ್ನಷ್ಟು ತೀವ್ರಗತಿಯಲ್ಲಿ ಪ್ರತಿಯೊಬ್ಬರ ಮನೆಮನಗಳನ್ನು ತಲುಪಲು ಶ್ರಮಿಸಿದ ಕೀರ್ತಿ ತುಂಬಾ ಅವಿಸ್ಮರಣೀಯವಾಗಿದೆ.

**ಪರಾಮರ್ಶನ ಗ್ರಂಥಗಳು**


1. ರೆಕ್ಕೆ ಬಿಚ್ಚಿ ಹಾರೋಣ– ಮಹಿಳಾ ಅಸ್ಮಿತೆಯ ಅರಿವು, ಸಂ.ಡಿ. ಯಶೋದಾ
2. ವಿಶೇಷ ಲೇಖಕಿ–ಅಖಿಲ ಕರ್ನಾಟಕ ಲೇಖಕಿಯರ ೭ನೇ ಸಾಹಿತ್ಯ ಸಮ್ಮೇಳನ ಬೆಂಗಳೂರು.
3. ಕರ್ನಾಟಕ ಕಾರ್ಮಿಕ ಲೋಕ–ಕನ್ನಡ ಮಾಸಿಕ, ಸಂದರ್ಶನ ಡಿ. ಸ್ಮಿತಾ ರೆಡ್ಡಿ.
4. ಭೂಮಿಗಾಥೆ–ಡಾ. ವಸುಂಧರಾ ಭೂಪತಿ (ಸಾಹಿತ್ಯ ಸೇತು ಪ್ರಶಸ್ತಿ ವಿಜೇತ ಕೃತಿ)
5. ಮಹಿಳೆ ಮತ್ತು ಮೌಢ್ಯ– ಡಾ. ವಸುಂಧರಾ ಭೂಪತಿ
6. ಭಕ್ತವಾಣಿ–ಸಂ. ಇಟಗಿ ಈರಣ್ಣ, ಪ್ರಸಾರಾಂಗ, ಗು.ವಿ.ಕ.
7. ಬಾನಾಡಿ– ಪ್ರ.ಸಂ.ಪ್ರೊ.ಬಿ. ಕಾರ್ಯನಿರ್ವಾಹ ಸಂ. ಡಾ. ನಾಗಪ್ಪ ಗೌಡ. ಆರ್.
8. ಭಾರತದಲ್ಲಿ ಮಹಿಳಾ ಅಧ್ಯಯನ– ಬಿ.ಎ. ೪ನೇ ಸೆಮಿಸ್ಟರ್ ರಾಮಚಂದ್ರ ಜೋಷಿ.